**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿ.ಸಿ. ಸಂಖ್ಯೆ. 1133/2018**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

- ವಿರುದ್ಧ -

**ಆರೋಪಿಗಳುಃ** 1) ಶ್ರೀ.ಶಿವನಂಜೇಗೌಡ ಬಿನ್ ಲೇಟ್ ನಂಜೇಗೌಡ
**ಮೃತಪಟ್ಟಿರುತ್ತಾರೆ (Abated)**

2) ಶ್ರೀ.ಮಹದೇವಗೌಡ ಬಿನ್ ಲೇಟ್ ನಂಜೇಗೌಡ
ವಯಸ್ಸು ಸುಮಾರು 67 ವರ್ಷ,
ವಾಸಃ ಹುಲ್ಲಹಳ್ಳಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯತಿಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ-1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ?

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-2.** ಫ್ರಾಸಾ-1 ಶ್ರೀ.ಶಿವಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 03.09.2017 ರಂದು ಮಧ್ಯಾಹ್ನ 11.00 ರಿಂದ 12.00 ಗಂಟೆ ಸಮಯದಲ್ಲಿ ತಾನು ತನಗೆ ಸೇರಿದ ಕಣೇನೂರು ಗ್ರಾಮದ ಸರ್ವೆ ನಂ.30/3 ರ ಜಮೀನಿನಲ್ಲಿದ್ದಾಗ ಆರೋಪಿಗಳು ಅವರಿಗೆ ಸೇರಿದ ಜಮೀನಿನಲ್ಲಿ ನೀರಾಯಿಸುತ್ತಿದ್ದರು. ಆಗ ತನ್ನ ಜಮೀನಿನಲ್ಲಿ ಜೋಳವನ್ನು ಬೆಳೆದಿದ್ದು ನೀರು ಹಾಯಿಸಬೇಡ ಎಂದು ಹೇಳಿದಾಗ 1 ನೇ ಆರೋಪಿ ಕೈಯಿಂದ ತನ್ನ ಮೈ-ಕೈಗೆ ಹೊಡೆದಿದ್ದಾರೆ. 2 ನೇ ಆರೋಪಿ ತನ್ನನ್ನು ಹಿಡಿದುಕೊಂಡು ಕಾಲಿನಿಂದ ತುಳಿದಿದ್ದು, ಗಲಾಟೆಯನ್ನು ಕೆಂಪನಾಯಕ, ಸಿದ್ದರಾಜ ಮತ್ತು ಚಿಕ್ಕತಾಯಮ್ಮರವರು ಬಿಡಿಸಿರುತ್ತಾರೆ. ನಂತರ ತಾನು ಪೋಲೀಸ್ ಠಾಣೆಗೆ ಹೋಗಿದ್ದು, ಪೋಲೀಸರು ಚಿಕಿತ್ಸೆ ಪಡೆದುಕೊಂಡು

ಬರುವಂತೆ ಹೇಳಿದಾಗ ತಾನು ಚಿಕಿತ್ಸೆಯನ್ನು ಪಡೆದುಕೊಂಡು ಬಂದು ಗಲಾಟೆಯಾದ 4 ದಿವಸಗಳ ನಂತರ ನಿಶಾನೆ ಪಿ-1 ರಂತೆ ದೂರು ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-3.** ಫ್ರಾಸಾ-1 ಶ್ರೀ.ಶಿವಣ್ಣ, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 03.09.2017 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ತನಗೆ ಸೇರಿದ ಕಣೇನೂರು ಗ್ರಾಮದ ಸರ್ವೆ ನಂ.30/3 ರ ಗದ್ದೆಗೆ ಆರೋಪಿ ತನ್ನ ಗದ್ದೆಯ ಮೂಲಕ ಶ್ರೀಮತಿ.ಕಮಲಮ್ಮರವರ ಗದ್ದೆಯಿಂದ ಪೈಪ್ ಮೂಲಕ ವ್ಯವಸಾಯಕ್ಕೆ ನೀರನ್ನು ತೆಗೆದುಕೊಂಡು ಹೋಗಿದ್ದು, ಸದರಿ ಪೈಪ್ ಲೀಕ್ ಆಗಿ ತನ್ನ ಗದ್ದೆಗೆ ನೀರು ತುಂಬಿಕೊಂಡು ಮುಸುಕಿನ ಜೋಳದ ಫಸಲಿಗೆ ತೊಂದರೆಯಾಗಿರುತ್ತದೆ. ತಾನು ಕೇಳಲು ಹೋದಾಗ ಆರೋಪಿಗಳು ತನ್ನ ಮೇಲೆ ಗಲಾಟೆ ಮಾಡಿ ಬೋಳಿ ಮಗನೆ ನಾವು ಇದೇ ರೀತಿಯಾಗಿ ನೀರನ್ನು ತೆಗೆದುಕೊಳ್ಳುತ್ತೇವೆ. ನೀನು ಏನು ಮಾಡುತ್ತಿಯೊ ಮಾಡಿಕೋ ಎಂದು ಬೈದಿರುತ್ತಾರೆ. 1 ನೇ ಆರೋಪಿ ತನ್ನನ್ನು ತಬ್ಬಿಹಿಡಿದುಕೊಂಡು ಕೆಳಕ್ಕೆ ಬೀಳಿಸಿ ಕೈಗಳಿಂದ ತನ್ನ ಬಲಗೆನ್ನೆಗೆ , ತಲೆಗೆ ಹಾಗೂ ಮೈಕೈಗೆ ಹೊದಿದ್ದು, ತನ್ನ ಬಲಗೆನ್ನೆಯ ಬಳಿ ಕಣ್ಣಿನ ಗೂಡಿನಲ್ಲಿ ಊತವಾಗಿದ್ದು, 2 ನೇ ಆರೋಪಿ ಕೈಗಳಿಂದ ತನ್ನ ಮೈ-ಕೈಗೆ ಗುದ್ದಿ, ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತಾರೆ. ನಂತರ ಕೆಂಪನಾಯಕ ಮತ್ತು ಚಿಕ್ಕನಾಯಕರವರು ಗಲಾಟೆ ಬಿಡಿಸಿರುತ್ತಾರೆ. ಆರೋಪಿಗಳಿಬ್ಬರು ಕೊಲೆ ಬೆದರಿಕೆ ಹಾಕಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-4.** ಫ್ರಾಸಾ-1 ಶ್ರೀ.ಶಿವಣ್ಣ, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ತಾನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆ ಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ತಾನು ಗ್ರಾಮದ ಮುಖಂಡರಿಗೆ ತಿಳಿಸಿ ದೂರನ್ನು ತಡವಾಗಿ ನೀಡಿರುತ್ತೇನೆ. ದೂರು ದಾಖಲಾದ ನಂತರ ಅದೇ ದಿವಸ ಪೋಲೀಸರು ಸ್ಥಳಕ್ಕೆ ಬಂದು ಮಧ್ಯಾಹ್ನ 4.00 ರಿಂದ 4.45 ರವರೆಗೆ ತಾನು ಸ್ಥಳ ತೋರಿಸಿದ ಮೇರೆಗೆ ತಾನು

ಹಾಗು ಚಾಸಾ-3 ಮತ್ತು 4 ರವರ ಸಮಕ್ಷಮ ನಿಶಾನೆ ಪಿ-2 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಿಶಾನೆ ಪಿ-2 ನ್ನು ಓದಿ ಸಹಿ ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-5.** ಫ್ರಾಸಾ-3 ಶ್ರೀ.ಚೇತನ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 07.09.2017 ರಂದು ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿರುವಾಗ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಫ್ರಾಸಾ-1 ರವರು ಠಾಣೆಗೆ ಹಾಜರಾಗಿ ನಿಶಾನೆ ಪಿ-1 ರಂತೆ ಲಿಖಿತ ದೂರು ನೀಡಿದ್ದು, ನಂತರ ಸದರಿ ದೂರನ್ನು ಪರಿಶೀಲಿಸಿ, ನಿಶಾನೆ ಪಿ-4 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುತ್ತಾರೆ. ಅದೇ ದಿವಸ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಫ್ರಾಸಾ-1 ರವರು ತೋರಿಸಿಕೊಟ್ಟಂತೆ ಚಾಸಾ-3 ಮತ್ತು 4 ರವರ ಸಮಕ್ಷಮ ನಿಶಾನೆ ಪಿ-2 ರಂತೆ ಮಹಜರ್ ಮಾಡಿರುತ್ತೇನೆ. ನಂತರ ಫ್ರಾಸಾ-1 ರವರು ಮರು ಹೇಳಿಕೆ, ಚಾಸಾ-2,3,5 ಮತ್ತು 6 ರವರ ಹೇಳಿಕೆ ಪಡೆದು ಕಡತವನ್ನು ಚಾಸಾ-10 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-6.** ಫ್ರಾಸಾ-5 ಶ್ರೀ.ಗಿರೀಶ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 03.07.2017 ರಂದು ಮಧ್ಯಾಹ್ನ 1.30 ರಿಂದ 2.00 ಗಂಟೆ ಸಮಯದಲ್ಲಿ ತನ್ನ ತಂದೆ ಗಾಬರಿಯಾಗಿ ಮನೆಗೆ ಬಂದಿರುತ್ತಾರೆ. ತಾನು ನೋಡಿದಾಗ ಅವರ ಬಲಭಾಗದ ಕಣ್ಣಿನ ಬಳಿ ರಕ್ತಗಾಯವಾಗಿದ್ದು, ಈ ಬಗ್ಗೆ ವಿಚಾರಿಸಿದಾಗ ಆರೋಪಿಗಳು ನೀರಿನ ವಿಷಯವಾಗಿ ಸರ್ವೆ ನಂ.30/3 ರ ಜಮೀನಿನಲ್ಲಿ ಗಲಾಟೆ ಮಾಡಿ ಕೈಯಿಂದ ಹಲ್ಲೆ ಮಾಡಿರುತ್ತಾರೆಂದು ತನಗೆ ತಿಳಿಸಿರುತ್ತಾರೆ. ನಂತರ ತಾನು ತನ್ನ ತಂದೆಯನ್ನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ತಾನು ಈ ವಿಚಾರವಾಗಿ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-7.** ಫ್ರಾಸಾ-5 ಶ್ರೀ.ಗಿರೀಶ, ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 03.09.2017 ರಂದು ಮಧ್ಯಾಹ್ನ 2.45 ಗಂಟೆ ಸಮಯದಲ್ಲಿ ತಾನು ಮನೆಯಲ್ಲಿರುವಾಗ ತನ್ನ ತಂದೆ ಮನೆಗೆ ಬಂದಿದ್ದು, ಅವರ ಮುಖದಲ್ಲಿ ಗಾಯವುಂಟಾಗಿರುವುದನ್ನು ನೋಡಿ, ತನ್ನ ತಂದೆಯನ್ನು ವಿಚಾರಿಸಿದಾಗ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಕಣೇನೂರು ಗ್ರಾಮಕ್ಕೆ ಸೇರಿದ ಸರ್ವೆ ನಂ. 30/3 ರಲ್ಲಿ ಗದ್ದೆ ಕೆಲಸ ಮಾಡುವಾಗ ಆರೋಪಿಗಳಾದ ನೀವು ಗದ್ದೆ ನೀರು ಹಾಯಿಸುವ ಸಲುವಾಗಿ ಪೈಪ್ ಅಳವಡಿಸಿದ್ದು, ಪೈಪ್ ಲೀಕ್ ಆಗಿ ತಮ್ಮ ಗದ್ದೆಗೆ ನೀರು ತುಂಬಿಕೊಂಡಿದ್ದು, ಮುಸುಕಿನ ಜೋಳಕ್ಕೆ ತೊಂದರೆಯಾಗಿದ್ದರಿಂದ ಆರೋಪಿಗಳನ್ನು ವಿಚಾರಿಸಿದಾಗ ಆರೋಪಿಗಳು ತನ್ನ ತಂದೆಯನ್ನು ಕೆಳಕ್ಕೆ ಬೀಳಿಸಿ ಕೈಗಳಿಂದ ಬಲಕೆನ್ನೆಯ ಬಳಿ ಮತ್ತು ಕಣ್ಣಿಗೆ ಹಾಗು ತಲೆಯ ಹತ್ತಿರ, ಬಲಕಿವಿ ಬಳಿ ಹೊಡೆದಿರುತ್ತಾರೆ. ಬಲಗಣ್ಣಿನ ಬಳಿ ಮತ್ತು ಕಿವಿಯ ಹತ್ತಿರ ಹಾಗು ಎದೆಗೆ ಹೊಡೆದಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ಗಲಾಟೆ ಬಿಡಿಸಿರುತ್ತಾರೆಂದು ತನಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ಆರೋಪಿಗಳು ಕೊಲೆ ಬೆದರಿಕೆ ಹಾಕಿರುತ್ತಾರೆಂದು ತನ್ನ ತಂದೆ ತಿಳಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-8.** ಫ್ರಾಸಾ-6 ಡಾ.ಸುರೇಶ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 03.09.2017 ರಂದು ತಾನು ಆಸ್ಪತ್ರೆಯಲ್ಲಿರುವಾಗ ಚಾಸಾ-5 ರವರು ಚಾಸಾ-1 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಆಸ್ಪತ್ರೆಗೆ ಬಂದಿದ್ದು, ತಾವು ಪರೀಕ್ಷೆ ಮಾಡಿ ನೋಡಿದಾಗ, ಮುಖ ಮತ್ತು ಎದೆಯ ಭಾಗದಲ್ಲಿ ತರಚಿದ ಗಾಯಗಳು, ಮೂಗಿನಲ್ಲಿ ಒಳಪಟು, ಮೂಗಿನ ಎರಡು ಒಳ್ಳೆಗಳಲ್ಲಿ ರಕ್ತಸ್ರಾವ ಕಂಡುಬಂದಿರುತ್ತದೆ. ಈ ಮೇಲ್ಕಂಡ ಗಾಯಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಚಿಕಿತ್ಸೆ ನೀಡಿ ಮುಂದಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಶಿಫಾರಸ್ಸು ಮಾಡುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ-9.** ಫ್ರಾಸಾ-6 ಡಾ.ಸುರೇಶ್, ಇವರು ತಮ್ಮ ಮುಂದುವರೆದ ಸಾಕ್ಷ್ಯ ವಿಚಾರಣೆಯಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿ ತನ್ನ ಮುಂದೆ ಹಾಜರುಪಡಿಸಿದ ಸಿ.ಟಿ ಸ್ಕ್ಯಾನ್

ವರದಿಯನ್ನು ಪರಿಶೀಲಿಸಿದಾಗ ಮೂಗಿನ ಬಲಭಾಗದ ಒಳಭಾಗದಲ್ಲಿ ಮೂಳೆ ಮುರಿತ ಮತ್ತು ಕಣ್ಣಿನ ಬಲಭಾಗದ ಮೂಳೆ ಮುರಿತವಾಗಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ತಾನು ನಿಶಾನೆ ಪಿ–5 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈ ಮೇಲೆ ಹೇಳಿರುವ ಗಾಯಗಳು ತೀವ್ರ ಸ್ವರೂಪ ಮತ್ತು ತಾಜಾ ಸ್ವರೂಪದ ಗಾಯಗಳಾಗಿರುತ್ತದೆ. ಒಬ್ಬ ವ್ಯಕ್ತಿ ಮುಷ್ಠಿ ಮಾಡಿ ಮತ್ತೊಬ್ಬ ವ್ಯಕ್ತಿಯ ಮುಖಕ್ಕೆ ಮೂಗಿಗೆ ಮತ್ತು ಕಣ್ಣಿನ ಭಾಗಕ್ಕೆ ಹಲ್ಲೆ ಮಾಡಿದಾಗ ಈ ಮೇಲೆ ಹೇಳಿದಂತಹ ಗಾಯಗಳಾಗುವ ಸಾಧ್ಯತೆಗಳಿರುತ್ತವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ–10.** ಫ್ರಾಸಾ–8 ಶ್ರೀ.ರವಿಶಂಕರ್ ಬಿ ಎಸ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10.05.2018 ರಂದು ಚಾಸಾ–8 ರವರಿಂದ ಕಡತವನ್ನು ಪಡೆದು ಪರಿಶೀಲಿಸಿ ನಿಶಾನೆ ಪಿ–7 ರಂತೆ ಸರ್ವೆ ನಂ.30/3 ರ ಪಹಣಿ ಪತ್ರಿಕೆಯನ್ನು ಪಡೆದು ಆರೋಪಿಗಳ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ–11.** ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

2 **ನೇ ಆರೋಪಿಯ ಉತ್ತರಃ**

**ಪ್ರಶ್ನೆ–12.** ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

2 **ನೇ ಆರೋಪಿಯ ಉತ್ತರಃ**

(ಮೇಲಿನ ಹೇಳಿಕೆಗಳನ್ನು 2 ನೇ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಕನ್ನಡದಲ್ಲಿ ಓದಿ ಹೇಳಿ ನಂತರ 2 ನೇ ಆರೋಪಿ ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸುತ್ತೇನೆ.)

**ದಿನಾಂಕಃ** 17.03.2026

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.**